**ಸಾಕ್ಷಿಯನ್ನು ದಿಃ *11/06/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಎಸಟಿಪಿ ಪ್ರತಿವಾದಿ ನಂ.4 ಪರ ವಕೀಲರಿಂದ.***

ನನ್ನ ತಂದೆಯ ಹೆಸರು ಭೀಮಸೇನ ಬಸಪ್ಪ ನಾಯಕ. ನನ್ನ ತಂದೆಗೆ ಎರಡು ಗಂಡು ಮತ್ತು ಮೂರು ಜನ ಹೆಣ್ಣುಮಕ್ಕಳು. ಒಟ್ಟು 5 ಜನರ ಪೈಕಿ ನಾನು ಮೂರನೇಯವಳು. ಮೃತ್ಯುಪತ್ರದಲ್ಲಿನ ಆಸ್ತಿಗಳ ವಿಭಜನೆ ಕೋರಿ ದಾವೆ ಸಲ್ಲಿಸಿದ್ದೇನೆ. ಮೃತ್ಯುಪತ್ರ ಅದು ನೊಂದಣಿಯಾಗಿಲ್ಲ. ಮೃತ್ಯುಪತ್ರದ

ನೈಜತೆ ಕುರಿತು ಯಾವುದೇ ಪರಿಹಾರ ಕೋರಿಲ್ಲ. ಮೃತ್ಯುಪತ್ರ ಆದ ದಿನಾಂಕ ನನಗೆ ಗೊತ್ತಿಲ್ಲ. ಆದರೆ 2016 ರಲ್ಲಿ ಆಗಿದೆ. ಮತ್ತೊಂದು ಮೃತ್ಯುಪತ್ರದ ದಿನಾಂಕ ನನಗೆ ಗೊತ್ತಿಲ್ಲ.

ಒಂದು ಮೃತ್ಯುಪತ್ರ ದಿಃ18-07-2016 ರಲ್ಲಿ ನೊಂದಣಿಯಾಗಿದೆ ಎಂದರೆ ಸರಿ. ಈ ದಾವೆ ದಾಖಲಿಸುವ ಮೊದಲು ಸದರಿ ಮೃತ್ಯುಪತ್ರದ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರದ ಬಗ್ಗೆ ಈ ದಾವೆ ದಾಖಲಿಸುವ ಕಾಲಕ್ಕೆ ನನ್ನ ಪರ ಪ್ರತಿನಿಧಿಸುವ ನನ್ನ ವಕೀಲರಿಗೆ ಮಾಹಿತಿ ನೀಡಿದ್ದೇನೆ. ಮೃತ್ಯುಪತ್ರದ ಅಸಲನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಸದರಿ ಮೃತ್ಯುಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸದೇಯಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮತ್ತೊಂದು ಮೃತ್ಯುಪತ್ರ 2017 ರಲ್ಲಿ ಆಗಿರಬಹುದು.

ದಿಃ18-07-2016 ರ ಮೃತ್ಯುಪತ್ರದ ಮಾಹಿತಿ ನನಗೆ ನನ್ನ ತಂದೆ ದಿಃ12-09-2017 ರಂದು ಮರಣ ಹೊಂದುವ ಕಾಲಕ್ಕೆ ತಿಳಿಯಿತು ಎಂದರೆ ಸರಿ. ಸದರಿ ಮೃತ್ಯುಪತ್ರದ ಬಗ್ಗೆ ಯಾವುದೇ ಕಾನೂನು ಪ್ರಕ್ರಿಯೆ ಕೈಗೊಂಡಿಲ್ಲ. ಸದರಿ ಮೃತ್ಯುಪತ್ರದ ಪ್ರಕಾರ ಆಸ್ತಿಗಳು ನನ್ನ ಸಹೋದರಿಯರಾದ 4 ನೇ ಪ್ರತಿವಾದಿ ರೂಪಾ ಮತ್ತು ಮರಣ ಹೊಂದಿರುವ ಪುಷ್ಪಾ ಇವರಿಗೆ ಹೋಗಬೇಕು ಎಂದು ಬರೆದಿದ್ದಾರೆ. ನನ್ನ ತಂದೆ ಮರಣ ಹೊಂದುವ ಕಾಲಕ್ಕೆ ಅವರ ವಯಸ್ಸು 95 ವರ್ಷ ಇತ್ತು. ನನ್ನ ತಂದೆಯವರು ತಹಶೀಲದಾರ ಆಗಿ ಕೆಲಸ ಮಾಡಿ ನಿವೃತ್ತಿ ಹೊಂದಿದ್ದರು. ನನ್ನ ತಂದೆ ಮರಣ ಹೊಂದುವ ಕಾಲಕ್ಕೆ ಯಾವುದೇ ಖಾಯಿಲೆಗಳಿಂದ ಬಳಲುತ್ತಿರಲಿಲ್ಲ. ಮೃತ್ಯುಪತ್ರವನ್ನು ಒಟ್ಟು ನಾಲ್ಕು ಆಸ್ತಿಗಳ ಕುರಿತು ಬರೆದಿದ್ದಾರೆ. ಈ ದಾವೆಯನ್ನು ಎರಡು ಆಸ್ತಿಗಳ ಕುರಿತು ಪರಿಹಾರ ಕೋರಿ ದಾಖಲು ಮಾಡಿದ್ದೇನೆ. ಸದರಿ ಆಸ್ತಿಗಳು ಎಂದರೆ ಅಳ್ನಾವರದಲ್ಲಿರುವ ಜಮೀನು ಮತ್ತು

ಸರಸ್ವತಪೂರದಲ್ಲಿರುವ 5 ಗುಂಟೆ ಜಾಗೆ ಮತ್ತು ಮನೆ, ಮಾಳಮಡ್ಡಿಯಲ್ಲಿ ಒಂದು ಪ್ಲಾಟು ಮತ್ತು ಕೆಹೆಚಬಿಯಲ್ಲಿರುವ ಪ್ಲಾಟು ಕುರಿತು ದಾಖಲಿಸಿರುತ್ತೇನೆ.

ಅಳ್ನಾವರದಲ್ಲಿರುವ ಜಮೀನನ್ನು ನನ್ನ ತಂದೆಯವರು ಸೇನೆಯಲ್ಲಿದ್ದ ಕಾರಣ ನಿವೃತ್ತಿಯಾದ ನಂತರ ಸರಕಾರದವರು ಮಂಜೂರು ಮಾಡಿದ್ದು ಇರುತ್ತದೆ. ಸದರಿ ಜಮೀನನ್ನು ಮಂಜೂರು ಮಾಡಿದ ವರ್ಷ ನನಗೆ ಗೊತ್ತಿಲ್ಲ. ಸದರಿ ಆಸ್ತಿಗೆ ನನ್ನ ತಂದೆ ಮಾತ್ರ ಹಕ್ಕುದಾರರು ಬೇರೆ ಯಾರು ಇಲ್ಲ ಎಂದರೆ ಸರಿ.

ಸರಸ್ವತಪೂರದಲ್ಲಿರುವ 5 ಗುಂಟೆ ಜಾಗೆ ಮತ್ತು ಮನೆ ನನ್ನ ತಂದೆಯವರು 1979 ರಲ್ಲಿ ಖರೀದಿ ಮಾಡಿದ್ದು ಇರುತ್ತದೆ. ಸದರಿ ಆಸ್ತಿಯನ್ನು ನನ್ನ ತಂದೆಯವರೇ ಸಂಪಾದಿಸಿದ್ದು, ಸದರಿ ಸಂಪಾದನೆಗೆ ನನ್ನ ತಂದೆಯ ಹೆಂಡತಿ ಮಕ್ಕಳು ಯಾವುದೇ ರೀತಿಯಲ್ಲಿ ಹಣ ವಿನಿಯೋಗ ಮಾಡಿಲ್ಲ ಎಂದರೆ ಸರಿ.

ಧಾರವಾಡದ ರೈಲ್ವೆ ಸ್ಟೇಶನ ಬಳಿ ಇರುವ ದಾವಾದ ಮೂರನೇ ಸ್ವತ್ತನ್ನು ನನ್ನ ತಂದೆಯವರು ಖರೀದಿ ಮಾಡಿದ್ದು ಇರುತ್ತದೆ. ಆದರೆ ಅದನ್ನು ಖರೀದಿ ಮಾಡಿದ ವರ್ಷ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನಿಮ್ಮ ತಂದೆಯವರೇ ತನ್ನ ಸ್ವಸಾಮರ್ಥ್ಯದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಸಹೋದರರು ಸಹ ಹಣ ವಿನಿಯೋಗ ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಆಸ್ತಿಯ ಕುರಿತಾದ ದಾಖಲೆಗಳು ನನ್ನ ಬಳಿ ಇವೆ. ಸದರಿ ದಾಖಲೆಗಳನ್ನು ಸಹ ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಈ ಕುರಿತು ಸಾಕ್ಷಿಯು ನಿ.ಪಿ.4 ನ್ನು ಉಲ್ಲೇಖಿಸುತ್ತಾರೆ. ನಿ.ಪಿ.4 ನಾನು ಅಥವಾ ನನ್ನ ಸಹೋದರ ಸಹೋದರಿಯವರು ಸದರಿ ಆಸ್ತಿ ಖರೀದಿಸಲು ಹಣ ಮತ್ತು ಶ್ರಮ ವಿನಿಯೋಗ ಮಾಡಿದ ಬಗ್ಗೆ ತೋರಿಸುವುದಿಲ್ಲ ಎಂದರೆ ಸರಿ. ಸದರಿ ಆಸ್ತಿ ಖರೀದಿಸಲು ಎರಡನೇ

ಪ್ರತಿವಾದಿ ಹಣ ಕೊಟ್ಟಿದ್ದಾನೆ. ಎರಡನೇ ಪ್ರತಿವಾದಿ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಎರಡನೇ ಪ್ರತಿವಾದಿ ಸದರಿ ಆಸ್ತಿ ಖರೀದಿಸಲು ನನ್ನ ತಂದೆಗೆ ಹಣ ಕೊಟ್ಟಿದ್ದಾರೆ ಎಂದು ತೋರಿಸಲು ನಿ.ಪಿ.4 ಹೊರತುಪಡಿಸಿ ಬೇರೆ ದಾಖಲೆ ಇಲ್ಲ ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ತಂದೆ ತನ್ನ ಸ್ವಸಂಪಾದನೆಯಿಂದ ಖರೀದಿ ಮಾಡಿದ್ದಾರೆ, ನಾನು ಅಥವಾ ಸಹೋದರ ಸಹೋದರಿಯವರು ಹಣ ವಿನಿಯೋಗಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನಾನು ಕೋರಿರುವಂತೆ ಯಾವುದೇ ಹಿಸ್ಸೆ ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೆಹೆಚಬಿಯವರು ಮಂಜೂರು ಮಾಡಿರುವ ಪ್ಲಾಟ ನಂಬರ ನನಗೆ ಗೊತ್ತಿಲ್ಲ. ಸದರಿ ಆಸ್ತಿ ನನ್ನ ಸಹೋದರಿ ಪುಷ್ಪಾ ಇವರ ಹೆಸರಿನಲ್ಲಿರುತ್ತದೆ. ಅದು ಯಾರ ತಾಬಾದಲ್ಲಿದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಈಗ ಯಾರ ತಾಬಾದಲ್ಲಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಆಸ್ತಿ 4 ನೇ ಪ್ರತಿವಾದಿ ರೂಪಾ ಇವರ ಹೆಸರು ಮತ್ತು ಕಬ್ಜೆಯಲ್ಲಿದೆ ಎಂದರೆ ಸರಿಯಲ್ಲ.

ನನ್ನ ಸಹೋದರಿ ಪುಷ್ಪಾ ಇವರು ವೃತ್ತಿಯಿಂದ ವಕೀಲರು ಆಗಿದ್ದರು. ಸದರಿ ಪುಷ್ಪಾ 2017 ಆಗಸ್ಟನಲ್ಲಿ ಮರಣ ಹೊಂದಿದ್ದಾರೆ. ಪುಷ್ಪಾ ಇವರು ಅವಿವಾಹಿತರು ಎಂದರೆ ಸರಿ. ಪುಷ್ಪಾ ಮತ್ತು 4 ನೇ ಪ್ರತಿವಾದಿ ಸರಸ್ವತಪೂರದಲ್ಲಿರುವ ಮನೆಯಲ್ಲಿ ನನ್ನ ತಂದೆಯ ಜೊತೆಗೆ ಇರುತ್ತಿದ್ದರು ಎಂದರೆ ಸರಿ. ನನ್ನ ತಾಯಿ 2020 ರಲ್ಲಿ ಮರಣ ಹೊಂದಿದ್ದಾರೆ. ನನ್ನ ತಾಯಿ ಮರಣ ಹೊಂದುವವರೆಗೆ ತನ್ನ ಗಂಡ, 4 ನೇ ಪ್ರತಿವಾದಿ ಹಾಗೂ ಪುಷ್ಪಾ ಇವರ ಜೊತೆ ಸರಸ್ವತಪೂರದಲ್ಲಿರುವ ಮನೆಯಲ್ಲಿರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಮುಪ್ಪಿನ ಕಾಲದಲ್ಲಿ ಪುಷ್ಪಾ ಮತ್ತು 4 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಪುಷ್ಪಾರವರು ನೋಡಿಕೊಳ್ಳುತ್ತಿದ್ದರು ಎಂದು

ಉತ್ತರಿಸುತ್ತಾರೆ. 4 ನೇ ಪ್ರತಿವಾದಿಯ ಮದುವೆ 2017 ರಲ್ಲಿ ಆಗಿದೆ. 4 ನೇ ಪ್ರತಿವಾದಿ ತನ್ನ ಮದುವೆಯಾಗುವವರೆಗೆ ನನ್ನ ತಂದೆಯ ಜೊತೆ ಇರುತ್ತಿದ್ದರು ಎಂದರೆ ಸರಿ. 4 ನೇ ಪ್ರತಿವಾದಿ ಮದುವೆ ಬಳಿಕ ಧಾರವಾಡದಲ್ಲಿ ನೆಲೆಸಿದ್ದಾರೆ ಎಂದರೆ ಸರಿ. 4 ನೇ ಪ್ರತಿವಾದಿ ಧಾರವಾಡದಲ್ಲಿ ನೆಲೆಸಿರುವ ಕಾರಣ ತನ್ನ ತವರುಮನೆಗೆ ಹೋಗಿಬರುವುದು ಮಾಡುವದರ ಜೊತೆಗೆ ತನ್ನ ತಂದೆ ತಾಯಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 2016 ನೇ ಇಸ್ವಿಯಲ್ಲಿ ರೂಪಾ ಮತ್ತು ಪುಷ್ಪಾ ನನ್ನ ತಂದೆಯವರ ಜೊತೆ ನನ್ನ ತಂದೆಯ ಮನೆಯಲ್ಲಿರುತ್ತಿದ್ದರು. ನಾನು ಮತ್ತು ನನ್ನ ಇನ್ನೊಬ್ಬ ಸಹೋದರಿ 1 ನೇ ವಾದಿ ಮದುವೆ ಬಳಿಕ ನಮ್ಮ ನಮ್ಮ ಗಂಡನ ಮನೆಯಲ್ಲಿದ್ದೇವು ಎಂದರೆ ಸರಿ. 1 ನೇ ವಾದಿಯ ಮದುವೆ 1985 ರಲ್ಲಿ ಮತ್ತು ನನ್ನ ಮದುವೆ 1991 ರಲ್ಲಿ ಆಗಿರುತ್ತದೆ. ನನ್ನ ಹಾಗೂ 1 ನೇ ವಾದಿಯ ಮದುವೆಯನ್ನು ನಿಮ್ಮ ತಂದೆಯವರೆ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಂದೆಯ ಜೊತೆಗೆ ನನ್ನ ಸಹೋದರ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ನೌಕರಿ ಸೇರಿದ ದಿನಾಂಕ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ನ್ಯೂ ಇಂಡಿಯಾ ಅಶ್ಯುರೇನ್ಸ ಕಂಪನಿಯಲ್ಲಿ ವಿಭಾಗೀಯ ಮ್ಯಾನೇಜರಾಗಿ ಕೆಲಸ ಮಾಡುತ್ತಿದ್ದರು. 2016 ನೇ ಇಸ್ವಿಯಲ್ಲಿ 2 ನೇ ಪ್ರತಿವಾದಿ ಬೆಂಗಳೂರಿನಲ್ಲಿ ನೌಕರಿ ಮಾಡುತ್ತಿದ್ದರು. ಎಷ್ಟನೇ ಸಾಲಿನವರೆಗೆ 2 ನೇ ಪ್ರತಿವಾದಿ ಬೆಂಗಳೂರಿನಲ್ಲಿದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಈಗಲೂ ಬೆಂಗಳೂರಿನಲ್ಲಿದ್ದಾರೆ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ನನ್ನ ತಂದೆಗೆ ಹಣ ಸಹಾಯ ಮಾಡುತ್ತಿದ್ದರು ಎಂದು ತೋರಿಸುವ ಯಾವುದೇ ದಾಖಲೆ ಹಾಗೂ ಮೌಖಿಕ ಸಾಕ್ಷಗಳು ನನ್ನ ಬಳಿ ಇಲ್ಲ. 2 ನೇ ಪ್ರತಿವಾದಿ ನನ್ನ ತಂದೆಗೆ ಹಣ ಸಹಾಯ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶೆಡ್ಯೂಲ ಎ ರಿಂದ ಸಿ ವರೆಗಿನ ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳು ಅಲ್ಲ, ಕಾರಣ ನಾನು ಅವುಗಳಲ್ಲಿ ಹಿಸ್ಸೆ ಕೇಳಲು ಅರ್ಹಳಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನನ್ನ ತಂದೆಯ

ಸ್ವತಂತ್ರ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ತನ್ನ ಸ್ವಂತ ಸ್ವತ್ತುಗಳು ಆಗಿರುವ ಕಾರಣ ನನ್ನ ತಂದೆಯವರು ಆರೋಗ್ಯವಾಗಿರುವ ಕಾಲಕ್ಕೆ ತನ್ನ ಇಚ್ಛೆಯಂತೆ ಮೃತ್ಯುಪತ್ರ ಬರೆಯುದರ ಮೂಲಕ ಪರಭಾರೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಪುಷ್ಪಾ ಮತ್ತು ರೂಪಾ ಸದರಿ ಮೃತ್ಯುಪತ್ರದ ಆಧಾರದಲ್ಲಿ ಸದರಿ ಆಸ್ತಿಗಳ ಮಾಲೀಕರು ಆಗಿದ್ದಾರೆ ಎಂದರೆ ಸರಿ. ಸದರಿ ಆಸ್ತಿಗಳು ನಿಮಗೆ ಯಾವುದೇ ರೀತಿಯಲ್ಲಿ ಸಂಬಂಧವಿಲ್ಲ ಎಂದು ಸೂಚಿಸಿದರೆ ಸಾಕ್ಷಿಯು ಉತ್ತರಿಸುವುದಿಲ್ಲ. ಸುಳ್ಳು ದಾವೆ ಸಲ್ಲಿಸಿ ಆ ಪ್ರಕಾರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಪಾಟೀ ಸವಾಲು : 2 ನೇ ಪ್ರತಿವಾದಿ ಪರ ವಕೀಲರಿಂದ.***

***2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರು ಇದ್ದಾರೆ. ಕೋರಿಕೆ ಇಲ್ಲ. ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.***

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.